ಸಾಕ್ಷಿ ಯನ್ನು ದಿಃ 12.02.2026 ರಂದು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಪ್ರತಿವಾದಿಯರ ಪರ ವಕೀಲರಿಂದಃ**

ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರವನ್ನು ಸಲ್ಲಿಸಿದ್ದು, ಅದರಲ್ಲಿ ಬರೆದಿರುವ ವಿಷಯಗಳು ಸತ್ಯವಾಗಿದ್ದು, ಅವುಗಳನ್ನು ನಾನೇ ನನ್ನ ವಕೀಲರಿಗೆ ಹೇಳಿ ಬರೆಸಿ, ಅದರಲ್ಲಿರುವ ವಿಷಯಗಳನ್ನು ತಿಳಿದುಕೊಂಡು ಸಹಿ ಮಾಡಿದ್ದೇನೆ. ನಾನು ಈ ಕೆಳಕಂಡ ದಾಖಲೆಗಳನ್ನು ಹಾಜರುಪಡಿಸಿದ್ದೇನೆ.

1. ದಿಃ 27.04.2011 ರಂದು ತಿಮ್ಮೇಗೌಡ, ಶಿವಣ್ಣ ಹಾಗೂ ದೇವಪ್ಪ ರವರ ನಡುವೆ ಆದ ಸ್ವಾಧೀನ ರಹಿತ ಕ್ರಯದ ಒಪ್ಪಂದ ಪತ್ರದ ಕಂಪ್ಯೂಟರ್ ದೃಢೀಕೃತ ನಕಲನ್ನು ನಿಡಿ - 3 ಎಂದು,
2. ದಿಃ 05.03.2018 ರ ತಿಳುವಳಿಕೆ ಪತ್ರವನ್ನು ನಿಡಿ - 4 ಎಂದು,
3. 3 ಅಂಚೆ ರಶೀದಿಗಳನ್ನು ನಿಡಿ - 5 ರಿಂದ 7 ಎಂದು,
4. ಒಂದು ಅಂಚೆ ಲಕೋಟೆಯನ್ನು ನಿಡಿ - 8 ಎಂದು,
5. 2 ಅಂಚೆ ಸ್ವೀಕೃತಿಗಳನ್ನು ನಿಡಿ - 9 ಮತ್ತು 10 ಎಂದು,
6. ದಿಃ 23.04.2018 ರ ತಿಳುವಳಿಕೆ ಪತ್ರವನ್ನು ನಿಡಿ - 11 ಎಂದು,
7. ದಿಃ 03.05.2018 ರ ಪ್ರತ್ಯುತ್ತರ ಪತ್ರವನ್ನು ನಿಡಿ - 12 ಎಂದು,
8. ಎಂ. ಹೊಸಹಳ್ಳಿ ಗ್ರಾಮದ ಸ.ನಂ.66 ರ 2025-26 ರ ಪಹಣಿ ಪತ್ರಿಕೆಯನ್ನು ನಿಡಿ - 13 ಎಂದು,
9. ಎಂ. ಹೊಸಹಳ್ಳಿ ಗ್ರಾಮದ ಎಂ.ಆರ್.ನಂ.ಹೆಚ್11/2017-18 ರ ಮ್ಯುಟೇಶನ್ ರಿಜಿಸ್ಟರ್ ಪ್ರತಿಯನ್ನು (2 ಪುಟಗಳು) ನಿಡಿ - 14 ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ವಾದಿಯರ ಪರ ವಕೀಲರಿಂದಃ ಸಮಯ ಕೋರಿದ್ದು, ಸಮಯ ನೀಡಿ ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯು ಹೇಳಿದಂತೆ ನನ್ನ ಉಕ್ತಲೇಖದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇ ಒ

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಪಿರಿಯಾಪಟ್ಟಣ